ಅಂದ್ಕಂಡು ಸಮಾಧಾನ ಪಟ್ಕಂಡ್ರ ಅವನ ಕಣ್ರೆಪ್ಪೆಗಳು ವಾನಗಳ ಜೋಗುಳದ ಸೌಂಡಿಗ ಕಾಯ್ತಿದ್ದವು.

ಅತ್ತಗ ಹೆಗ್ಡಳ್ಳಿ ದಿಕ್ಕಿಂದ ಇತ್ತಗ ಬ್ಯಾಳಾರ್ದಿಕ್ಕಿಂದ ಹಸ ಕುರಿ ಅಟ್ಕಂಡು ಬತ್ತಿದ್ದವ್ರು ಇಂದು ಬಂದಿಲ್ಲ, ಈ ವಾನಗಳೂ ಬಂದಿಲ್ಲ. 'ಏನಾಗಿದ್ದು ಊರ್ಗ?' ನಾರಾಯ್ಣಿಗ ತಲೆಕೆಟ್ಟೋದಂಗಾಯ್ತು. ಗದ್ದಗ ನೀರ್ ಹಾಯ್ಸಕ ಬರೋರು, ತೆವ್ರ್ ಕಟ್ಟೋಕ ಬರೋರು, ಹಳ ಎಮ್ಮೆಲ್ಲೆರ ತೋಟದ ಕೆಲ್ಸಕ್ಕ ಬರೋರು ಯಾರೂವಿ ಕಾಣ್ತಿಲ್ಲ! ಕಣ್ಣಿದ್ದಷ್ಟೂ ತುಂಬ್ಕಳ್ಳೋ ಆ ಗದ್ದ ಆ ಕಬ್ಬಿನ್ ತೋಟದ ರಾಶಿ ಒಳಗ ನಾರಾಯ್ಣಿ ಮತ್ತ ಅವನ ನಾಕು ಕುರಿಮರಿಗಳು ಬಿಟ್ರ ಲೋಕದಲ್ಲಿ ಜನ ಬದ್ಕಿದ್ದೂ ಅಂತ ಹೇಳಾಕ ಮತ್ಯಾವ ಸಾಕ್ಷಿಯೂ ಇಲ್ದಂಗಿತ್ತು.

ಹಟ್ಟಿಗೋಗಾಂವು ಅಂದ್ರ ಈಗಷ್ಟೇ ಮರಿಗಳ ಅಟ್ಕಂಡು ಬಂದಿರಾದು. ಅವಕ್ಕ ಹೊಟ್ಟೆ ತುಂಬಿರಲ್ಲ. ಮನಿಕಳಾವು ಅಂದ್ರ ರೋಡು ಮನಿಕಂಡು ಬಿಸ್ಲಿಗ ಮಯ್ನ ಟಾರು ಕಾಯಿಸ್ತಾ ದಗೆ ಎಬ್ಬಿಸಿ ಕೆಣಕ್ತದ. 'ನೂರಾಳೇಶ್ವರ ಈ ಊರ್ಗ ಈ ಜನಕ್ಕ ಯಾನಾಗಿದ್ದು? ಕೈಕಾಲು ಬಿದ್ದೋಗಿದ್ದಾ? ಯಾರೂವಿ ಓಡಾಡ್ತಿಲ್ಲ!' ಅಂತ ಅಚ್ಚರಿ ಪಟ್ಕಂಡು ನಂಜನಗೂಡ್ಲ ದಿಕ್ಕಿಂದ ಬರೋ ವಾನಗಳ ಕಾಯ್ತ ತಮ್ಮೂರು ಮುಗುದು ಬ್ಯಾಳಾರ್ದಿಕ್ಕಿಗ ತಿರುಗುವಲ್ಲಿ ರೋಡು ಚೂಪಾಗಿತ್ತಲ್ಲ-ಅಲ್ಲಿಗ ಕಣ್ಣ ದೃಷ್ಟಿಯ ಚುಚ್ಗಂಡು ಕೂತನು.

ಹೆಗ್ಡಳ್ಳಿಲೋ ಇಲ್ಲ ಬ್ಯಾಳಾರಲ್ಲೋ ಯಾರೋ ನಾಕು ಹಟ್ಟಿಗಳ ತೂದು ಎಸ್ದಂಗ, ಅವ್ ಹೋಗಿ ಎಲ್ಡೂ ಊರ ನಡುವಿಗ ಹಳ್ಳದಂಗಿದ್ದ ಜಾಗದಲ್ಲಿ ಬಿದ್ದಂಗ, ಅಲ್ಲಿ ನಾಕ್ ಸಂಸಾರ ಬಾಳಾಟ ಮಾಡ್ದಂಗ ನಡೆದ್ರೂವಿ ಅದೊಂದು ಊರು ಅನ್ನಿಸ್ಕಳಾಕ ಒಂದು ಹೋಟ್ಲಾಗ್ಲಿ ಒಂದಂಗ್ಡಿ ಒಂದ್ ಬಸ್ ಸ್ಟ್ಯಾಂಡೂ ಸುದ ಇರ್ನಿಲ್ಲ. ಯಾವಾಗ ಹಳಕಾವ್ಲಿ ಪಕ್ಕದ ಜಮೀನ ತಕ್ಕಂಡು ಹಳೆ ಎಮ್ಮೆಲ್ಲೆಯವ್ರು ತೋಟ ಮಾಡುದ್ರೋ... ಆಗ ಹುಲ್ಲಳ್ಳಿಗೋ ನಂಜನಗೂಡ್ಗೋ ಓಡಾಡೋ ಬಸ್ಗಳ ಸೀಟಿ ಕೇಳಾಕ ಸುರುವಾಯ್ತು. ಆದ್ರೂವಿ ಅಲ್ಲಿ ನಾಕ್ ಹಟ್ಟಿ ಪಕ್ಕುಕ್ಕ ಇನ್ನೊಂದು ಹಟ್ಟಿ ಆಗ್ನೇ ಇಲ್ಲ.

ಕಾಲು ಮೇಲೆ ಕಾಲಾಕಂಡಿದ್ದ ಅಂಗಾಲಿಗೆ ಲಾಟಿಯ ಏಟು ಬೀಳುತ್ಲೇ ತಂಗ ನಿದ್ದೆ ಬಂದಿತ್ತು ಅನ್ನೋ ಅರಿವು ನಾರಾಯ್ಣಿಗ ಬತ್ತು. ಅಂಗಾಲಿನ ಏಟಿಗ ನೆತ್ತಿಗ ಕರೆಂಟು ಹೊಡ್ದಂಗ ಆಗಿತ್ತು. ಏನ ಎತ್ತ? ಅನ್ನೋದ್ರೊಳಗ ಎಲ್ಡು ಲಾಟಿಗಳು ಅವನ ಕಾಲಿನ ಮೂಳ ಮುರಿಯೋ ಹಂಗ ಹೊಯ್ತಿದ್ದವು. "ಬೋಳಿಮಗನೆ ಮನೆಯಿಂದ ಹೊರಗೆ ಬರ್ಬಾರ್ದು ಅಂತ ಗೊತ್ತಿಲ್ವಾ? ಓಡು. ಇಲ್ಲಿದ್ರೆ ಕಾಲು ಮುರ್ದಾಕ್ತಿನಿ" ಅಂತ ಒಂದು ಲಾಟಿ ಕೂಗ್ತ ಬಾರ್ಸಿದ್ದು ಎಲ್ಲೋ ದೂರ್ದಂಗ ಕೇಳಿದಂಗಾಯ್ತು. ಓಡಬೇಕು ಅಂತ ಮೊದಲ್ನೆ ಏಟಿಗ ಅನ್ಸಿತ್ತು ನಾರಾಯ್ಣಿಗ. ಆದರ ಅವನಿಗ ಏಳೋಕೆ ಆಯ್ತಿರ್ನಿಲ್ಲ. ಓಡು ಅಂತ ಮತ್ತೂ ಹೊಡಿತವ. ಕಣ್ಣೀರು ಮತ್ತು ಕಾಲಿನಾಗ ರತ್ತ ಎರಡೂ ಒಂದೇ ಸಮಕ್ಕ ಹರಿತಿದ್ರೂ 'ತನಗ ಯಾತಕ್ಕ ಹೊಡಿತವ್ರ, ತಾನ್ ಮಾಡಿರೋ ತಪ್ಪಾದ್ರೂವಿ ಏನ?' ಅಂತ ಅರುತ್ಗಳ್ಳಾಕ ಆಗ್ದೆಯ ಬಾಯಿ ಬಂದಾಗಿತ್ತು. ಎದ್ದೇಳಕ ಅಂತ ಕೈ ನೆಲಕ್ಕ ಮಡ್ಗಿ ದೇಹದ ಭಾರವ ಬುಟ್ಟು ಕಾಲೆಳೆದ್ರ ಅವು ಅಲುಗಾಡ್ತನೇ ಇರ್ನಿಲ್ಲ. 'ಲಾಟಿ ಏಟ್ಗ ಬೆಲೆನೇ ಇಲ್ವಾ? ಬಡ್ಡಿಮಗ್ನೆ ಕಾಲು ಮುರ್ದಾಕ್ತೀನಿ' ಅಂತ ಇನ್ನೆರಡೇಟು ಹಾಕಿದವು. 'ಮುರ್ದೋಗದ ಬುದ್ದಿ' ಅಂತ ಕಣ್ಣೀರಾಗಿ ಕೈಮುಗಿದನು. 'ಬೇಗ ಹೋಗು ಇನ್ನು ಮನೆಯಿಂದ ಹೊರಗೆ ಬರಬಾರದು' ಅಂತ ಹೇಳ್ಬುಟ್ಟು ಹುಲ್ಲಳ್ಳಿ ದಿಕ್ಕಿಗ ಜೀಪು ಓಡಿತು.

* * *

ಲಾಕ್ ಡೌನ್ ಅಂಬೋದು ಲೋಕಕ್ಕ ಹೊಸದಾಗಿತ್ತು. ನಿನ್ನೆ ಜಿನ ಮೂಟೆ ಬಿಚ್ಚಿ ಬಿದ್ದೋಗಿದ್ದ ರಾಗಿಕಾಳು ಕಂಡಂಗ ಚಲ್ಲಾಡ್ಕಂಡಿದ್ದ ಬೆಂಗ್ಳೂರು ಅಂಬೋ ಸಿಟಿ ಒಂದ್ ರಾತ್ರಿ ಕಳೆಯೋದ್ರೊಳಗ ಚೆಲ್ಕಂಡಿದ್ನ ಮೂಟೆ ಒಳಗ ಸೇರ್ಸಿ ತುಂಬಿ ಅವುಸಿಟ್ಟಂಗ ಕಾಲಿ ಕಾಲಿ ಆಗಿತ್ತು. 'ಗೌರ್ಮೆಂಟು ಹೇಳೋಗಂಟ ಬೇಕರಿ ಬಾಕ್ಲು ತೆಗೆಯಲ್ಲ ಊರ್ಗ ವೊಂಟೋಗಿ' ಅಂದ್ಕಂಡು ಓನರು ಕೈಗೊಸಿ ಕಾಸ್ನ ಕೊಟ್ಬುಟ್ಟು ಮೂರ್ಜನ ಕೆಲಸದ ಹುಡುಗ್ರ ಮುಖದ ಮೇಲೆ ಕಬ್ಬಿಣದ ಬಾಕ್ಲ ಗಡಗಡ ಎಳ್ದು ಹೋಗಿದ್ದರು. ಆ ಮೂರ್ಜನಾವಿ ಒಂದೊಂದೂರಿಂದ ಬೆಂಗ್ಳೂರ್ದಿಕ್ಕ ಕೆಲಸ ಹುಡಿಕಂಡು ಬಂದಿದ್ರು. ಒಬ್ಬ ಕುಂದಾಪ್ರ ಕಡೆಯಿಂದ, ಮತ್ತೊಬ್ಬ ಬಿಜಾಪುರದಿಂದ ಇನ್ನೊಬ್ಬ ಅಂಕಪ್ಪ ನಂಜನಗೂಡಿಂದ ಬಂದು ಆ ಬೇಕರಿನಲ್ಲಿ ದುಡಿತಿದ್ರು.

ಮಯ್ಸೂರು ದಿಕ್ಕಿಗ ಓಡಾಡೋ ಬಸ್ಸುಗಳು ಬಂದು ಹೋಗೋ ಬಸ್ ಸ್ಟ್ಯಾಂಡಿನಾಗ ಅಂಕಪ್ಪನ ಬೇಕರಿ ಇದ್ದು ಜಿನಾವಿ ಮಯ್ಸೂರು, ಮಂಡ್ಯ, ಮದ್ದೂರು, ಚೆನ್ನಪಟ್ಣ ಕಡೆಯ ಜನಗಳು ಬಂದೋಗೋದ್ರಿಂದ